Prevention of Overload in Buses in mofussil areas.

Q.—1213. Sri A. MOHAMED SAIT (Mysore City North).—

Will the Government be pleased to state :—

(*a*) the machinery devised by Government to check and prevent overloading in the mofussil buses wherein passengers standing for long distances create congestion and inconvenience to passengers;

(*b*) the action taken against persons detected or reported for overloading ?

A.—Sri C. M. POONACHA (Minister for Home Affairs and Industries).—

(*a*) There is a supervisory staff of Traffic Inspectors, etc., with the Road Transport Department for the purpose of checking and preventing overloading in Government buses. The officers of the Police Depertment and Motor Vehicles Department also check suspected cases of overloading.

(*b*) Departmental enquiry is held and the case is decided on merits. Crew found responsible are punished according to the degree of their responsibility fixed in the departmental proceedings. Necessary action is also taken in accordance with the Indian Motor Vehicles Act and Rules thereunder by the Police and Motor Vehicles Departments.

ಶ್ರೀ ಎ. ಮಹಮದ್ ಸೇಟ್.—ಮೈಸೂರಿನಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಮೈಸೂರಿಗೆ ಬಸ್ಸುಗಳಲ್ಲಿ ನಿಂತುಕೊಂಡು ಬರಬೇಕೆಂದು ಹೇಳುವುದರಿಂದ ಜನಗಳಿಗೆ ಪ್ರಯಾಣ ಮಾಡಲು ತೊಂದರೆಯಲ್ಲವೇ?

*ಶ್ರೀ ಸಿ. ಎಂ. ಪೂಣಚ್ಚ.—ಬಸ್ಸುಗಳಲ್ಲಿ ಪ್ರಯಾಣಿಕರನ್ನು ತೆಗೆದುಕೊಳ್ಳುವಂಥ ಮಿತಿಗೆ ಕೆಲವೊಂದು ರೂಲ್ಸ್ ಇವೆ. ಆದರ ಪ್ರಕಾರ, ಹುಬ್ಬಳ್ಳಿ ರೀಜನ್ ಬೊಂಬಾಯಿ ಕರ್ನಾಟಕ ಪ್ರಾಂತ್ಯದಲ್ಲಿ 30 ಸೀಟ್ ಇದ್ದರೆ 25 ಕ್ಕೇಕಡ ಜಾಸ್ತಿ ತೆಗೆದುಕೊಳ್ಳಲು ಪರ್ಮಿಷ್ ಇದೆ. ನಮ್ಮ ಹಳೆಯ ಮೈಸೂರು ಪ್ರದೇಶದಲ್ಲಿ ಬಸ್ಸಿನ ಪ್ರತಿ ಪ್ಯಾಸೆಂಜರ್‌ಗೂ ಐದು ಜಾಸ್ತಿ ತೆಗೆದುಕೊಳ್ಳಬಹುದು ಎಂದು ಒಂದು ಮಿತಿ ಇದೆ. ಆ ಮಿತಿಯನ್ನನು ಸರಿಸಿ ಮಾತ್ರ ಪ್ರಯಾಣಿಕರನ್ನು ತೆಗೆದುಕೊಳ್ಳುತ್ತಾರೆಯೇ ಹೊರತು ಅದಕ್ಕಿಂತ ಹೆಚ್ಚು ನಮ್ಮ ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳಲ್ಲಿ ತೆಗೆದುಕೊಳ್ಳುತ್ತಿಲ್ಲ. ಖಾಸಗಿ ಬಸ್ಸುಗಳಲ್ಲಿ ಬಹಳ ಓವರ್ ಲೋಡ್ ಆಗುತ್ತಾ ಇದೆ. ಹೆಚ್ಚು ಪ್ರಯಾಣಿಕರನ್ನು ತೆಗೆದುಕೊಳ್ಳುತ್ತಾರೆ. ಇದು ಸರ್ಕಾರದವರ ದೃಷ್ಟಿಗೆ, ಅವಗಾಹನೆಗೆ ಬಂದಿದೆ. ಅಂತಹ ಸಂದರ್ಭದಲ್ಲಿ ಸೂಕ್ತವಾದ ಕಾರ್ಯಕ್ರಮಗಳನ್ನು ಸಂಬಂದಪಟ್ಟ ಇಲಾಖೆಯವರು ತೆಗೆದುಕೊಳ್ಳುತ್ತಿರುತ್ತಾರೆ.

ಶ್ರೀ ಎ. ಮಹಮದ್ ಸೇಟ್.—೩½ ರೂಪಾಯಿ ಕೊಟ್ಟು ಕುಳಿತುಕೊಂಡು ಹೋಗುವುದಕ್ಕೆ ಬದಲಾಗಿ ನಿಂತುಕೊಂಡು ಹೋಗಬೇಕೆನ್ನುವ ಪನಿಷ್‌ಮೆಂಟ್‌ನ್ನು ಜನಗಳಿಗೆ ಏಕೆ ಕೊಡುತ್ತೀರಿ? ನ್ಯಾಷನ್‌ಲೈಸ್ ಮಾಡುವುದು ಜನಗಳಿಗೆ ಹೆಚ್ಚು ಸೌಕರ್ಯ ಒದಗಿಸಿ ಕೊಡುವುದಕ್ಕೆ ಎಂದು ಹೇಳುತ್ತಿರುವಾಗ ದುಡ್ಡು ನಂಪಾದನೆ ಮಾಡುವುದಕ್ಕೆ 86 ಮೈಲು ನಿಂತುಕೊಂಡು ಹೋಗಬೇಕೆಂದರೆ ಇದು ಯಾವ ನ್ಯಾಯ ಎಂದು ನಾನು ಕೇಳುತ್ತೇನೆ.

ಅಧ್ಯಕ್ಷರು.—ಈ ಪ್ರಶ್ನೆಗೆ ಮಾನ್ಯಮಂತ್ರಿಗಳು ಆಗಲೆ ಉತ್ತರ ಹೇಳಿದ್ದಾರೆ. ಕ್ರಮತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.

ಶ್ರೀ ಎ. ಮಹಮದ್ ಸೇಟ್.—ಮೈಸೂರು, ಬೆಂಗಳೂರು ಮತ್ತು ಇತರ ಲಾಂಗ್ ರೂಟ್ಸ್‌ನಲ್ಲಿ ಓಡಾಡುವ ಬಸ್ಸುಗಳಿಗೆ ಒಳಕ್ಕೆ ಹೋಗುವುದಕ್ಕೆ, ಹೊರಕ್ಕೆ ಬರುವುದಕ್ಕೆ ಒಂದೇ ಬಾಗಿಲು ಇರುವುದು ತಮಗೆ ಗೊತ್ತಿದೆಯೇ? ಏನಾದರೂ ಅನಾಹುತವಾದರೆ ಎಲ್ಲರೂ ನತ್ತು ಹೋಗಬೇಕು ಎಂಬುದ್ದೇಶವೇ? ಹೊರಗೆ ಬರುವುದಕ್ಕೆ ಅವಕಾಶವೇ ಇಲ್ಲವಲ್ಲಾ!

ಶ್ರೀ ಸಿ. ಎಂ. ಪೂಣಚ್ಚ.—ಸಿಟಿ ಬಸ್ಸುಗಳಲ್ಲಿ ಎರಡು ಪಾರ್ಶ್ವದಲ್ಲೂ ಹತ್ತಲಿಕ್ಕೂ ಇಳಿಯಲಿಕ್ಕೂ ದ್ವಾರ ಇರುತ್ತದೆ. ದೂರ ಪ್ರಯಾಣ ಮಾಡುವಂಥಾದ್ದರಲ್ಲಿ ಒಂದೇ ಇದೆ. ಏಕೆಂದರೆ ಸಿಟಿಗಳಲ್ಲಿ ಸಮೀಪದ ದೂರಕ್ಕೆ ಪ್ರಯಾಣ ಮಾಡುವುದರಿಂದ ಹತ್ತುವುದು ಇಳಿಯುವುದು ಬಹಳ ಆಗುತ್ತದೆ. ದೂರದ ಪ್ರಯಾಣದ ಮಾರ್ಗಗಳಲ್ಲಿ ಒಂದೇ ದ್ವಾರ ಇಟ್ಟಿರುತ್ತಾರೆ. ಅದು ನಿಜ.

Sri C. K. RAJAIAH SETTY.—Sir, is the Government aware that there are more accidents due to overloading since the last one or two years ?

Sri C. M. POONACHA.—There have been some accidents. But I cannot say that these accidents were mainly due to overloading. So far as I am aware, the accidents were on account of ceratin mechanical failures.

ಶ್ರೀ ಜೆ. ವೆಂಕಟಪ್ಪ.—ನಮ್ಮ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಮೈಲಿಗೆ ಇಷ್ಟು ಹಣತಂದು ಕೊಡಬೇಕೆಂದು, ನಿಗದಿ ಮಾಡಿಲ್ಲವೇ?

ಅಧ್ಯಕ್ಷರು.—ಆ ಪ್ರಶ್ನೆ ಬರುವುದಿಲ್ಲ.

ಶ್ರೀ ಜೆ. ವೆಂಕಟಪ್ಪ.—ಮೈಲಿಗೆ ಎಷ್ಟು ವರಮಾನ ಬರಬೇಕೆಂದು ನಿಗದಿ ಮಾಡಿದ್ದೀರಿ!

ಅಧ್ಯಕ್ಷರು.—ಯಾವ ರೀತಿ ಓವರ್‌ಲೋಡ್ ಆಗುವುದನ್ನು ತಡೆಯಬಹುದು ಎಂಬ ವಿಚಾರಕ್ಕೆ ಸಂಬಂಧಿಸಿದ ಪ್ರಶ್ನೆ ಇದ್ದರೆ ಕೇಳಿ.

ಶ್ರೀ ಜೆ. ವೆಂಕಟಪ್ಪ.—ನಿಗದಿ ಮಾಡಿರುವುದಕ್ಕಿಂತ ಹೆಚ್ಚು ಹಣ ಬಂದಾಗ ಓವರ್‌ಲೋಡ್ ಹಾಕಿ ಹಣ ತಂದುಕೊಡುತ್ತಾರೆ ಎಂದು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲವೇ?

ಶ್ರೀ ಸಿ. ಎಂ. ಪೂಣಚ್ಚ.—ಈ ಓವರ್‌ಲೋಡ್ ಮಾಡುವುದಕ್ಕೂ ಒಂದು ಮಿತಿ ಇದೆ ಎಂದು ಹೇಳಿದೆ. ಆ ಪ್ರಮಾಣದಲ್ಲಿ ಹೆಚ್ಚು ಜನ ಪ್ರಯಾಣಿಕರನ್ನು ತೆಗೆದುಕೊಂಡು ಹೋಗುತ್ತಾರೆ. ಅಷ್ಟು ಮಟ್ಟಿಗೆ ಹೆಚ್ಚು ಉತ್ಪನ್ನ ಆಗುವಂತಹ ಸಂಭವ ಇದೆ.

ಶ್ರೀ ಜೆ. ವೆಂಕಟಪ್ಪ.—ಆ ಮಿತಿಗಿಂತಲೂ ಹೆಚ್ಚು ಮಡ್ಡು ತಮಗೆ ತಂದುಕೊಟ್ಟಿಲ್ಲವೇ ?

(Answer was not given)

Sri G. B. SHANKAR RAO.—Are the Government aware of the instances of overloading by the conductors in excess of the permitted overloading in the Hubli Division ?

Mr. SPEAKER.—This is too general a question. It is not possible to give such details.

Sri G. B. SHANKAR RAO.—There are regular instances of overloading by the conductors.

Mr. SPEAKER.—How can such questions of detail be asked here ?

Sri G. B. SHANKAR RAO.—I want to know from the Government whether they check every day the way bills of the conductors ?

Sri C. M. POONACHA.—Yes, Sir. We have a special staff—a line checking staff in each region and for the information of my Hon'ble friend I can give out the number. In the Hubli region, we have 66 ; in the Bangalore Division we have 26 and in Raichur Division, we have 28.

Sri A. R. KARISIDDAPPA.—Sir, I want to know the number of overload cases booked by the police in the Bangalore Division ?

Sri C. M. POONACHA.—If the question is for the current year, I do not have figures. I have figures for the previous year. In the Bangalore Division, we had as many as 40 cases detected and all cases were charge-sheeted by the police. I do not know as to how these cases have ended.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಓವರ್‌ಲೋಡ್ ಹೆಚ್ಚುತ್ತಿರುವುದರಿಂದ ಹೆಚ್ಚಿಗೆ ಬಸ್ಸುಗಳನ್ನು ಹಾಕಲಿಕ್ಕೆ ವ್ಯವಸ್ಥೆಮಾಡ್ತಿದ್ದೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಹೌದು, ಕೆಲವು ಮಾರ್ಗಗಳಲ್ಲಿ ಪ್ರಯಾಣಿಕರ ಸಂಖ್ಯೆ ಬಹಳ ಹೆಚ್ಚಾಗಿದೆ. ಅಲ್ಲಿ ಹೆಚ್ಚು ಬಸ್ಸುಗಳನ್ನು ಇಡಬೇಕು ಎನ್ನುವಂಥ ವಿಚಾರ ನಡೆಯುತ್ತಿದೆ. ಆ ಏರ್ಪಾಡು ಮಾಡುತ್ತೇವೆ.

1-30 P.M.

ಶ್ರೀ ಟಿ. ಹನುಮಯ್ಯ.—ಈ ಪ್ರಶ್ನೆ ಸರ್ಕಾರಿ ಬಸ್ಸುಗಳಿಗೆ ಸಂಬಂಧಪಟ್ಟದ್ದೋ ಅಥವಾ ಖಾಸಗಿ ಬಸ್ಸುಗಳಿಗೆ ಸಂಬಂಧಪಟ್ಟದ್ದೋ ?

ಶ್ರೀ ಸಿ. ಎಂ. ಪೂಣಚ್ಚ.—ಇದರಲ್ಲಿ ಎಲ್ಲಕ್ಕೂ ಸಂಬಂಧಪಟ್ಟ ಹಾಗೆ ಜವಾಬು ಕೊಟ್ಟಿದೆ. ಖಾಸಗಿ ಬಸ್ಸುಗಳಾದರೆ ಪೋಲೀಸರು ನೋಡಿಕೊಳ್ಳುತ್ತಾರೆ. ಸರ್ಕಾರಿ ಬಸ್ಸುಗಳಾದರೆ ಇಲಾಖೆಯ ಅಧಿಕಾರಿಗಳು ನೋಡಿಕೊಳ್ಳುತ್ತಾರೆ.

ಶ್ರೀ ಟಿ. ಹನುಮಯ್ಯ.—ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುವ ಬಸ್ಸುಗಳಲ್ಲಿ ಮಿತಿಮೀರಿ ಪ್ರಯಾಣಿಕರನ್ನು ತುಂಬುವುದರಿಂದ ಬಹಳ ದೂರದ ವರೆಗೆ ನಿಂತುಕೊಂಡು ಪ್ರಯಾಣ ಮಾಡುವ ಪ್ರಯಾಣಿಕರುಗಳಿಗೆ ಉಂಟಾಗುವ ಕಿಕ್ಕಿರಿತ ಮತ್ತು ಅನನುಕೂಲತೆಗಳನ್ನು ತಡೆಗಟ್ಟಲು ಮತ್ತು ಹೋಗಲಾಡಿಸಲು ಸರ್ಕಾರದವರು ಸಿಬ್ಬಂದಿವರ್ಗವನ್ನೇನಾದರೂ ನೇಮಿಸಿಕೊಂಡಿರುವರೆ ಎಂದು ಕೇಳಿರುವುದಕ್ಕೆ ಉತ್ತರವಾಗಿ ಸರ್ಕಾರಿ ಬಸ್ಸುಗಳಲ್ಲಿ ಹೆಚ್ಚುಭರ್ತಿ ತಡೆಯುವುದಕ್ಕಾಗಿ ಮತ್ತು ಅದನ್ನು ತಪ್ಪಿಸುವುದಕ್ಕಾಗಿ ರೋಡ್ ಟ್ರಾಫಿಕ್ ಸ್ಕ್ವೋರ್ಟ್ ಇಲಾಖೆಯಲ್ಲಿ ಟ್ರಾಫಿಕ್ ಇನ್‌ಸ್ಪೆಕ್ಟರರು ಮುಂತಾದವರಿಂದ ಕೂಡಿದ ಒಂದು ಮೇಲ್ಸಿಚಾರಕ ವರ್ಗವಿದೆ ; ಹೆಚ್ಚುಭರ್ತಿಯ ಸಂಶಯ ಬಂದರೆ ಪೋಲೀಸ್ ಖಾತೆಯ ಅಧಿಕಾರಿಗಳೂ ಮತ್ತು ಮೋಟಾರು ವಾಹನಗಳ ಖಾತೆಯ ಅಧಿಕಾರಿಗಳೂ ಕೂಡ ತಪಾಸಣೆ ಮಾಡುತ್ತಾರೆ ಎಂದು ಹೇಳಲಾಗಿದೆ. ಖಾಸಗಿ ಬಸ್ಸುಗಳ ವಿಚಾರ ಕೇಳಿದರೆ ಎರಡಕ್ಕೂ ಉತ್ತರ ಕೊಟ್ಟಿದೆ. ಆದುದರಿಂದ ಈ ಪ್ರಶ್ನೆ ಖಾಸಗಿ ಬಸ್ಸುಗಳಿಗೆ ಸಂಬಂಧಪಟ್ಟದ್ದೋ ಅಥವಾ ಸರ್ಕಾರಿ ಬಸ್ಸುಗಳಿಗೆ ಸಂಬಂಧಪಟ್ಟದ್ದೋ ಎಂದು ಕೇಳುತ್ತೇನೆ.

ಶ್ರೀ ಸಿ. ಎಂ ಪೂಣಚ್ಚ.—ಮಾನ್ಯ ಸದಸ್ಯರು ಕೇಳಿದುದಕ್ಕೆ ಸ್ಪಷ್ಟವಾಗಿ ಉತ್ತರ ಕೊಟ್ಟಿದೆ.

ಶ್ರೀ ಟಿ. ಹನುಮಯ್ಯ.—ನಾನು ಕೇಳುವುದು, ಇದು ಸರ್ಕಾರಿ ಬಸ್ಸುಗಳಿಗೆ ಸಂಬಂಧಪಟ್ಟದ್ದಲ್ಲವೆ, ಎಂದು ?

ಅಧ್ಯಕ್ಷರು.—"The reply is quite clear" ಎಂದು ಹೇಳಿದ್ದಾರೆ.

ಶ್ರೀ ಟಿ. ಹನುಮಯ್ಯ.—ಅವರು ಸರ್ಕಾರಿ ಬಸ್ಸುಗಳು ಎಂದು ಕೇಳಿದ್ದಿಲ್ಲ ; ಆದರೆ ಮಂತ್ರಿಗಳು ಸರ್ಕಾರಿ ಬಸ್ಸು ಎಂದು ಅರ್ಥವಾಗುವ ಹಾಗೆ ಉತ್ತರ ಕೊಟ್ಟಿದ್ದಾರೆ. ಈ ಪ್ರಶ್ನೆ ಖಾಸಗಿ ಬಸ್ಸುಗಳಿಗೆ ಅನ್ವಯಿಸುತ್ತದೆಯೇ ಇಲ್ಲವೇ ?

ಅಧ್ಯಕ್ಷರು.—ಉತ್ತರ ಸ್ಪಷ್ಟವಾಗಿದೆ ಎಂದು ಹೇಳಿದ್ದಾರೆ.

ಶ್ರೀ ಟಿ. ಹನುಮಯ್ಯ.—ತಾವು ಹೇಳುವುದು ಬೇಡ ; ಅವರೇ ಹೇಳಲಿ.

ಅಧ್ಯಕ್ಷರು.—ನಾನು ಹೇಳಲಲ್ಲ. ಅವರು ಹೇಳಿದುದು ತಮಗೆ ಕೇಳಿಸಲಿಲ್ಲವೆಂದು ನಾನು ಅದನ್ನು ಹೇಳಿದೆ, ಅಷ್ಟೆ.

ಶ್ರೀ ಸಿ. ಎಂ. ಪೂಣಚ್ಚ.—ಕೊಟ್ಟಿರುವ ಉತ್ತರದಲ್ಲಿ ಈ ವಿಷಯವನ್ನು ಸ್ಪಷ್ಟವಾಗಿ ವಿವರಿಸಿದೆ. ಸರ್ಕಾರಿ ಬಸ್ಸುಗಳ ಮಟ್ಟಿಗೆ ನಮ್ಮದೇ ಸಿಬ್ಬಂದಿ ಇದೆ. ಅವರು ಚೆಕ್ ಮಾಡುತ್ತಾರೆ. ಖಾಸಗಿ ಬಸ್ಸುಗಳ ವಿಚಾರದಲ್ಲಿ ಪೋಲೀಸರು ನೋಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಸರ್ಕಾರಿ ಬಸ್ಸುಗಳಲ್ಲಿ 'ಓವರ್ ಲೋಡ್' ಮಿತಿ ಎಷ್ಟಿರಬೇಕೆಂದಿದೆ ?

ಅಧ್ಯಕ್ಷರು.—ಇಲ್ಲಿ ಶೇಕಡ ಐದು, ಬೊಂಬಾಯಿನಲ್ಲಿ ಶೇಕಡ 25 ಎಂದು ಹೇಳಿದ್ದಾರೆ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಇದು ಖಾಸಗಿ ಬಸ್‌ಗಳಿಗೂ ಅನ್ವಯಿಸುತ್ತದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಎಲ್ಲ ಬಸ್‌ಗಳಿಗೂ ಅನ್ವಯಿಸುತ್ತದೆ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಖಾಸಗಿ ಬಸ್‌ಗಳಲ್ಲಿ ಶೇಕಡ ಒಂದರಷ್ಟು 'ಓವರ್ ಲೋಡ್' ಆದರೂ ಅವರ ಮೇಲೆ ಕೇಸುಗಳನ್ನು ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಈ ಮಿತಿಯನ್ನು ಮೀರಿದರೆ ತಪ್ಪಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಮಿತಿಯ ಒಳಗಾದರೂ ಕೇಸ್ ಹಾಕುತ್ತಿರುವುದು ಗೊತ್ತಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಆ ವಿಷಯದಲ್ಲಿ ನನ್ನಲ್ಲಿ ಮಾಹಿ ಇಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಬಸ್ ಪ್ರಯಾಣದ ಸುಖದುಃಖಗಳ ಪ್ರತ್ಯಕ್ಷ ಅನುಭವವನ್ನು ಪಡೆಯಲು ಮಾನ್ಯ ಮಂತ್ರಿಗಳು ಬಸ್‌ಗಳಲ್ಲಿ ಪ್ರಯಾಣ ಮಾಡುವ ಅಭ್ಯಾಸವನ್ನಿಟ್ಟುಕೊಂಡಿದ್ದಾರೆಯೇ ?

ಅಧ್ಯಕ್ಷರು.—ಅದು ಸಂಬಂಧಪಟ್ಟ ಉಪಪ್ರಶ್ನೆಯಾಗಲಾರದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—'ಚೆಕಿಂಗ್ ಇನ್‌ಸ್ಪೆಕ್ಟರ್' ಕೆಲಸ ಚೆಕ್‌ಮಾಡುವುದಲ್ಲವೆ ?

ಶ್ರೀ ಸಿ. ಎಂ. ಪೂಣಚ್ಚ.—ತಮ್ಮ ಪ್ರಶ್ನೆಯಲ್ಲೇ ಉತ್ತರ ಅಡಕವಾಗಿದೆ. ಬಸ್‌ಗಳನ್ನು ಚೆಕ್‌ಮಾಡುವುದೇ ಅವರ ಕೆಲಸ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಂದರೆ, ಟಿಕೆಟ್ ಇಲ್ಲದೆ ಪ್ರಯಾಣ ಮಾಡುವವರ ವಿಷಯ ಬೇರೆಯವರು ದೂರು ಕೊಟ್ಟರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಸಿ. ಎಂ. ಪೂಣಚ್ಚ.—ವಿಚಾರಣೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೂರು ಕೊಟ್ಟವರೇ ಸಾಕ್ಷಿಗಳನ್ನು ಕೊಡಬೇಕೆ ?

ಶ್ರೀ ಸಿ. ಎಂ. ಪೂಣಚ್ಚ.—ಸರ್ಕಾರಿ ಬಸ್ಸುಗಳಲ್ಲಿ ಅಂಥ ಏನಾದರೂ ನ್ಯೂನತೆಗಳು ಕಂಡರೆ ಅಥವಾ ಆಕ್ಷೇಪಣೆ ಮಾಡುವುದಿದ್ದರೆ ಸದಸ್ಯರಾದರೂ ಸಾರ್ವಜನಿಕರಾದರೂ ಆ ಕಡೆ ಸರ್ಕಾರದ ದೃಷ್ಟಿಯನ್ನೆಳೆಯಬಹುದು. ಅದನ್ನು ಸರ್ಕಾರದವರು ವಿಚಾರಣೆ ಮಾಡುತ್ತಾರೆ. ದಾಖಲೆಗಳೇನಾದರೂ ಆ ಸಂಬಂಧವಾಗಿ ಅಗತ್ಯವೆಂದು ಕಂಡುಬಂದರೆ ಅವರನ್ನು ಕರೆಸಲಾಗುತ್ತದೆ. ಅವರು ಬಂದರೆ, ಸಮಸ್ಯೆಯೇನಾದರೂ ಇದ್ದರೆ ಪರಿಹರಿಸಲವಕಾಶವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅಷ್ಟಾಗಿ ಅಗತ್ಯ ಬೀಳದೇ ಇರಬಹುದು. ಆದುದರಿಂದ, ಯಾವ ರೀತಿ ಆರೋಪಣೆ ಇರುತ್ತದೆಯೋ ಅದನ್ನವಲಂಬಿಸುತ್ತದೆ.

Sri M. C. NARASIMHAN.—What is the difficulty in totally banning overloading ?

Sri C. M. POONACHA.—Overloading is prohibited under the law. To ban it is not very easy. After all, it is a human factor. There may be a certain amount of conveniences available for travelling. The travelling public may be very large in number. Of course, that is entirely a separate question. Here, the question is as to what arrangements the Government have made to check overloading in buses, both private and Government-owned. To that question, answer has been given.

Sanction accorded for the I.P. Sets in Sira and Pavagada Taluks.

Q.—1239. Sri T. TAREGOWDA (Sira).—

Will the Government be pleased to state :—

(*a*) the number of irrigation pump sets estimates sanctioned from 1st November 1956 to 30th June 1957 for Sira and Pavagada taluks ;

(*b*) the number of irrigation pump sets (electric motors) for which electric power is given the names of the villages may be furnished with hobliwar and taluk war figures in Sira and Pavagada taluks) ;

(*c*) the estimates pending before the Electrical Superintendent, Chikkaballapur, regarding these two taluks and with the Chief Engineer for Electricity, Bangalore, and the concerned Minister for Electricity ;

(*d*) the reason for delay in sanctioning the pending estimates ?

A.—Sri H. K. VEERANNA GOWDH (Minister for Public Works).—

(*a*) Forty-one estimates for 50 I.P. sets in Sira and 28 estimates for 32 I.P. sets in Pavagada taluks have been sanctioned during the period from 1st November 1956 to 30th June 1957.

Number of irrigation pumping sets serviced in Sira from 1st November 1956 to 30th June 1957		39
Serviced in August 1957 ...		1
Total ...		40

(*b*) Number of irrigation pumping sets serviced in Pavagada from 1st November 1956 to 30th June 1957 ... 28

Serviced in July and August 1957 ... 2

Total ... 30